ಕೈಗಿಟ್ಟಿದ್ದು ಐದು ಸಾವಿರ ರೂಪಾಯಿಗಳನ್ನು. ಆ ಕ್ಷಣ ಆತನ ಮುಖದಲ್ಲಿ ಪ್ರತ್ಯಕ್ಷವಾದ ಪ್ರಸನ್ನತೆಯನ್ನು ನೋಡಬೇಕಿತ್ತು! ಒಂದು ಗಂಟೆ ಕಾಲ ಶ್ರಾದ್ಧದ ಕ್ರಿಯಾವಿಧಾನಗಳನ್ನು ಮುಗಿಸಿ ಪಿಂಡಗಳನ್ನು ಮೆಟ್ಟಿಲಿಳಿದು ಗಂಗೆಗೆ ಬಿಡಲು ಹೇಳಿದ್ದ. ಆಗ ಅಲ್ಲೇ ದೋಣಿಯ ಪಕ್ಕ ನಿಂತಿದ್ದ ವ್ಯಕ್ತಿಯೊಬ್ಬ, ''ಭಯ್ಯಾ ಪಿಂಡವನ್ನು ಗಂಗೆಯ ಈ ಭಾಗದಲ್ಲಿ ಬಿಟ್ಟರೆ ಪ್ರಯೋಜನವಿಲ್ಲ. ನನ್ನ ದೋಣಿಯಲ್ಲಿ ಪಿಂಡ ಸಮೇತ ಬನ್ನಿ, ಅಗೋ ಅಲ್ಲಿ ಕಿಲೋಮೀಟರ್ ದೂರದ ಮಣಿಕರ್ಣಿಕ ಘಾಟ್ ಹತ್ತಿರ ಕರೆದುಕೊಂಡು ಹೋಗುತ್ತೇನೆ. ಅಲ್ಲಿ ಪಿಂಡವನ್ನು ಬಿಟ್ಟರೆ ಗ್ಯಾರಂಟಿ ನಿಮ್ಮವರು ಸೀದಾ ಸ್ವರ್ಗದ ಬಾಗಿಲಲ್ಲೇ ಹೋಗಿ ನಿಲ್ಲುತ್ತಾರೆ. ಅಷ್ಟು ಪವಿತ್ರವಾಗಿರುತ್ತಾಳೆ ಗಂಗೆ ಅಲ್ಲಿ. ಇದು ನಾನೊಬ್ಬನೇ ಹೇಳುತ್ತಿರುವ ಮಾತಲ್ಲ, ಇಡೀ ಕಾಶಿಯಲ್ಲಿ ಮನೆಮಾತಾಗಿರುವ ನಂಬಿಕೆ. ಇಲ್ಲಿಂದ ಅಲ್ಲಿಗೆ ಹೋಗಲು ಮಾಮೂಲಿ ಎಲ್ಲರೂ ಏಳುನೂರು ರೂಪಾಯಿ ತಗೋತಾರೆ. ನನಗೆ ಬರಿ ಐದುನೂರು ಕೊಡಿಯಷ್ಟೆ, ಅರ್ಧ ಗಂಟೆ ಕೆಲಸ'' ಎಂದಿದ್ದ. ನಾನು ಶ್ರಾದ್ಧ ಮಾಡಿಸಿದ ಪಂಡಿತ ಸಾಧುವಿನ ಕಡೆ ನೋಡಿದ್ದೆ. ಆತ ಶುಷ್ಕ ನಗೆಯೊಂದನ್ನು ಹೊರಸೂಸಿ, ''ಆಂ ನಿಜ, ಅಂಥ ನಂಬಿಕೆಯೊಂದು ಬಲವಾಗಿ ಇಲ್ಲಿ ಬೇರೂರಿದೆ. ಅದಕ್ಕೆ ಮಣಿಕರ್ಣಿಕ ಘಾಟ್‌ನಲ್ಲಿ ದಿನಕ್ಕೆ ಏನಿಲ್ಲದಿದ್ದರೂ ನೂರಿನ್ನೂರು ಹೆಣಗಳು ಬೆಂಕಿಗೆ ಆಹುತಿಯಾಗುತ್ತವೆ. ಅದೋ ಅಲ್ಲಿ ದಟ್ಟವಾದ ಹೊಗೆ ಕಂಡು ಬರುತ್ತಿದೆಯಲ್ಲ ಅದೇ ಮಣಿಕರ್ಣಿಕ. ಬೇಕಾದರೆ ನೀವೊಂದು ಗಂಟೆ ಅಲ್ಲಿ ಕುಳಿತು ಬರಬಹುದು. ಆದರೂ ಇಲ್ಲಿಂದ ಹೋದ ಗಂಗೆ ಅಲ್ಲಿ ಸಡನ್ನಾಗಿ ಹೇಗೆ ಪವಿತ್ರವಾಗುತ್ತಾಳೋ ಆ ವಿಶ್ವನಾಥನೊಬ್ಬನಿಗೇ ಗೊತ್ತು. ನಿಮ್ಮಿಷ್ಟ, ಬೇಕಾದರೆ ದೋಣಿಯಲ್ಲಿ ಹೋಗಿ ಅಲ್ಲೇ ಪಿಂಡವನ್ನು ಬಿಟ್ಟು ಬನ್ನಿ'' ಎಂದಿದ್ದ. ನಾನು ಸಂದಿಗ್ಧದಲ್ಲಿ ಕ್ಷಣ ಬಿದ್ದವನು ನಂಬಿಕೆಯೊಂದಿಗೆ ನಡೆಯುವುದೇ ಸರಿಯೆಂದು ಪಿಂಡದೊಂದಿಗೆ ಬೋಟ್ ಹತ್ತಿದೆ...'' ಡಿಕ್ರ್ಯಾಸ್ಟ್ರೊ ಮಾತು ನಿಲ್ಲಿಸಿ ಗ್ಲಾಸಿನಲ್ಲಿದ್ದ ಸ್ವಲ್ಪ ವಿಸ್ಕಿಯನ್ನು ಒಂದೇ ಗುಟುಕಿಗೆ ಮುಗಿಸಿ, ''ಏನಾದ್ರೂ ಬೋರ್ ಅನ್ನಿಸ್ತಾ, ಡ್ರಿಂಕ್ಸ್ ಸಾಕು, ಊಟ ಮಾಡೋಣ.



ನಿನಗೆ ಬೇಸರ ಅನ್ನಿಸದಿದ್ದರೆ ಗಂಗೆಯ ಬಗ್ಗೆ ಇನ್ನೊಂದಿಷ್ಟು ಹೇಳೋದಿದೆ, ಹೇಳಿ ಮುಗಿಸಲಾ...'' ಎಂದಿದ್ದ. ''ಖಂಡಿತಾ ಹೇಳಿಬಿಡು, ತುಂಬಾ ಇಂಟರೆಸ್ಟಿಂಗ್ ಆಗಿದೆ. ಇನ್ನೊಂದತ್ತು ನಿಮಿಷ, ಊಟ ಮಾಡಿಕೊಂಡು ಹೊರಟು ಬಿಡ್ತೀನಿ. ನೀನು ಇವೊತ್ತು ಸಿಕ್ಕಿರೋದೆ ನನ್ನ ಪುಣ್ಯ...'' ಎಂದು ನನಗರಿವಿಲ್ಲದೆ ಎದೆಯೊಳಗಿನ ಪ್ರೀತಿಯನ್ನು ಹೊರಹಾಕಿದ್ದೆ. ಅದು ಅವರ ಮನೆಯಿಂದ ನಾವು ಪಡೆದ ಉಪಕಾರದ